ಪರವಾಗಿ ಮಾತನಾಡುತ್ತಿದ್ದೇನೆ. I am interested in the common man. ನಾನು ಕೇಳುತ್ತಿರುವುದು ಕೆಂಪು ಬಸ್ಸುಗಳನ್ನು ಏಕೆ ಕಡಿಮೆ ಮಾಡಿದಿರಿ ಎಂದು?

ಅಧ್ಯಕ್ಷರು:- ನನಗೆ ಅರ್ಥವಾಗಿದೆ. ತಾವು ಪ್ರಶ್ನೆ ಕೇಳುತ್ತಿರುವುದು ನನಗೆ ಅರ್ಥವಾಗಿದೆ. ಸನ್ಮಾನ್ಯ ಸಾರಿಗೆ ಸಚಿವರು ಇಷ್ಟನ್ನು ಮಾತ್ರ ತಾವು ಅರ್ಥ ಮಾಡಿಕೊಳ್ಳಬೇಕು. ಕೆಂಪು ಬಸ್ಸುಗಳಲ್ಲಿ ಟಿಕೇಟ್ ದರ ಕಡಿಮೆ ಆಗುತ್ತದೆ. ಪುಷ್ಪಕ್ ಬಸ್ಸುಗಳಲ್ಲಿ ದರ ಹೆಚ್ಚಾಗುತ್ತದೆ ಆದ್ದರಿಂದ ಪುಷ್ಪಕ್ ಬಸ್ಸು ಹೆಚ್ಚು ಮಾಡುವುದರಿಂದ ಸಾಮಾನ್ಯ ಜನರಿಗೆ ತೊಂದರೆಯಾಗುತ್ತದೆ ಎಂದು ಅವರು ಕೇಳುತ್ತಿದ್ದಾರೆ. ಅದಕ್ಕೆ ಇಂಪ್ರೂವ್ ಮಾಡುತ್ತೇವೆಂದು ಹೇಳಿದ್ದಾರಲ್ಲಾ.

ವಿಷಯ:- ದ.ಕ.ಜಿಲ್ಲೆಯಲ್ಲಿ ನಷ್ಟದಲ್ಲಿ ನಡೆಯುತ್ತಿರುವ ಸೇವಾಸಹಕಾರ ಸಂಘಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 81 (426)

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು):- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಸೇವಾ ಸಹಕಾರ ಸಂಘಗಳು ಇವೆ?

ಆ) ಈ ಪೈಕಿ ಎಷ್ಟು ಲಾಭದಲ್ಲಿವೆ? ಎಷ್ಟು ನಷ್ಟದಲ್ಲಿವೆ?

ಇ) ಒಂದು ವೇಳೆ ನಷ್ಟದಲ್ಲಿ ನಡೆಯುತ್ತಿದ್ದರೆ ಅದಕ್ಕೆ ಕಾರಣಗಳೇನು?

ಈ) ನಷ್ಟದಲ್ಲಿ ನಡೆಯುತ್ತಿರುವುದನ್ನು ಪುನಃಚೇತನಗೊಳಿಸಲು ಅಥವಾ ಮುಚ್ಚಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು):-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 158 ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘಗಳು ಇವೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 158 ಸಂಘಗಳ ಪೈಕಿ 70 ಸಂಘಗಳು ಲಾಭದಲ್ಲಿಯೂ ಮತ್ತು 87 ಸಂಘಗಳು ನಷ್ಟದಲ್ಲಿಯೂ ಕಾರ್ಯನಿರ್ವಹಿಸುತ್ತಿವೆ. ಒಂದು ಸಂಘ ಸಮಾಪನೆಯಲ್ಲಿರುತ್ತದೆ.

ಇ) ಹೆಚ್ಚಿನ ಬಡ್ಡಿ ದರದ ಠೇವಣಿಗಳ ಮೂಲಕ ಸಂಗ್ರಹಿಸಿದ ಹಣವೆಲ್ಲವನ್ನೂ ಲಾಭದಾಯಕವಾಗಿ ವಿನಿಯೋಗಿಸಿಕೊಳ್ಳಲು ಸಾಧ್ಯವಾಗದೇ ಇರುವುದು ಆದಾಯಕ್ಕಿಂತಾ ನಿರ್ವಹಣ ವೆಚ್ಚ ಅಧಿಕವಾಗಿರುವುದು ಹಾಗೂ ಮುಂತಾದ ಕಾರಣಗಳಿಂದಾಗಿ ನಷ್ಟ ಉಂಟಾಗಿರುತ್ತದೆ.

ಈ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ವ್ಯಾಪಾರಾಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಅವುಗಳ

ಕಾರ್ಯ ಚಟುವಟಿಕೆಗಳ ದರವನ್ನು ವಿಸ್ತರಿಸಲು ಪ್ರಯತ್ನ ಮಾಡಲಾಗುತ್ತದೆ. ಕಡಿಮೆ ವೆಚ್ಚದ ಸಂಪನ್ಮೂಲ ಹೊಂದಿಸಲು ಸಹಾಯ ಮಾಡುವ ಉದ್ದೇಶದಿಂದ ಸರ್ಕಾರ ನಬಾರ್ಡಿನಿಂದ ಷೇರು ಬಂಡವಾಳ ಹಣ ಪಡೆದು ಷೇರು ಬಂಡವಾಳ ಮಂಜೂರು ಮಾಡುತ್ತದೆ.

ಶ್ರೀ ಡಿ.ವಿ.ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಸುಮಾರು 158 ಸಹಕಾರ ಸಂಘಗಳ ಪೈಕಿ 87 ಸಹಕಾರ ಸಂಘಗಳು ನಷ್ಟವನ್ನು ಅನುಭವಿಸುತ್ತಿವೆ ಎಂದು ಹೇಳಿದ್ದಾರೆ. ಜೊತೆಗೆ ಆ ಸಂಘಗಳು ಬಡ್ಡಿ ದರದ ಠೇವಣಿಗಳ ಮೂಲಕ ಸಂಗ್ರಹಿಸಿದ ಹಣವನ್ನೆಲ್ಲಾ ಲಾಭದಾಯಕವಾಗಿ ಉಪಯೋಗಿಸಿಕೊಳ್ಳಲು ಸಾಧ್ಯವಾಗದೇ ಇರುವುದರಿಂದ ಮತ್ತು ಆದಾಯಕ್ಕಿಂತ ನಿರ್ವಹಣಾ ವೆಚ್ಚ ಅಧಿಕವಾಗಿರುವುದರಿಂದ ನಷ್ಟವುಂಟಾಗುತ್ತಿದೆ ಎಂದು ಹೇಳಿದರು. ಬಹುಶಃ ತಮ್ಮ ಗಮನಕ್ಕೆ ಒಂದು ವಿಚಾರ ಬಂದಿದೆಯೇ ಎಂದು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಪ್ರೈಮರಿ ಸೊಸೈಟಿಗಳು ಜನರ ಕೈಯಿಂದ ಠೇವಣಿಯನ್ನು ಸಂಗ್ರಹ ಮಾಡುತ್ತಾರೆ, ಈ ಕೇಂದ್ರ ಸಹಕಾರಿ ಬ್ಯಾಂಕ್‌ಗಳು ಏನು ಮಾಡುತ್ತವೆ ಅಂದರೆ ಅವರು ಸಂಗ್ರಹಿಸಿದ ಠೇವಣಿಯಲ್ಲಿ ಶೇಕಡ 50ರಷ್ಟು ಕೇಂದ್ರ ಸಹಕಾರಿ ಬ್ಯಾಂಕ್‌ನಲ್ಲಿ ಇಡಬೇಕು ಎನ್ನುವಂತಹ ಒತ್ತಡವನ್ನು ತರುವುದರ ಮೂಲಕ ಮತ್ತು ಕೇಂದ್ರ ಸಹಕಾರಿ ಬ್ಯಾಂಕ್‌ನಲ್ಲಿ ಬಡ್ಡಿ ದರ ಕಡಿಮೆ ಇರುವ ಕಾರಣ ಅದರಿಂದ ತೊಂದರೆ ಆಗುತ್ತದೆ. ಅವರೇ ಪಡೆದುಕೊಂಡಾಗ ಠೇವಣಿಯನ್ನು ಹೆಚ್ಚಿಗೆ ಬಡ್ಡಿಗೆ ವಿನಿಯೋಗ ಮಾಡಿದರೆ ಜಾಸ್ತಿ ಆಗುತ್ತದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಇನ್ನು ಎರಡನೆಯದಾಗಿ, ಹಿಂದಿನ ವರ್ಷಗಳಲ್ಲಿ ಬಡ್ಡಿ ಮನ್ನಾ ಮಾಡಿದ ಹಣ ಇನ್ನೂ ಸಹಕಾರ ಸಂಘಗಳಿಗೆ ತಲುಪಿಲ್ಲವಾದ್ದರಿಂದ ಅವರ ಬ್ಯಾಲೆನ್ಸ್ ಶೀಟ್ ನಷ್ಟದಲ್ಲೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಎಸ್.ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ಸಹಕಾರ ಸಂಘಗಳಲ್ಲಿರುವಂಥ ಠೇವಣಿಯನ್ನು ಜಿಲ್ಲಾ ಕೇಂದ್ರ ಬ್ಯಾಂಕ್‌ಗಳಲ್ಲಿ ಕಡ್ಡಾಯವಾಗಿ ಇಡಬೇಕೆಂದೇನೂ ಇಲ್ಲ. ಮೋರ್ಡ್‌ನವರು ತಮ್ಮ ಬಿಸ್‌ನೆಸ್‌ನಲ್ಲಿ ತೊಡಗಿಸಿಕೊಂಡು ಉಳಿದ ಹಣವನ್ನು ಕೇಂದ್ರ ಬ್ಯಾಂಕ್‌ನಲ್ಲಿ ಠೇವಣಿ ಇಡಬೇಕೆಂದು ಕೇಳಲಾಗಿದೆಯೇ ವಿನಃ ಎಲ್ಲಾ ಹಣವನ್ನು ಠೇವಣಿ ಇಡಬೇಕೆಂದು ಹೇಳಿಲ್ಲ. ಬಡ್ಡಿ ಮನ್ನಾ ಮಾಡಿರುವ ಯೋಜನೆಯಲ್ಲಿ ಸರ್ಕಾರದಿಂದ ಕೊಡಬೇಕಾದ ಹಣ ತುಂಬುವುದಕ್ಕೆ ಸ್ವಲ್ಪ ತಡವಾಗಿದೆ. ಆದರಿಂದ ವಸೂಲಾತಿಗೆ ಏನೂ ತೊಂದರೆಯಾಗಿಲ್ಲ. ವಸೂಲಾತಿ ಕೂಡ ಜಾಸ್ತಿಯೇ ಆಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ವಸೂಲಾತಿ ಜಾಸ್ತಿಯಾಗಿರುವುದು ಹೇಗೆ ಎಂಬುದನ್ನು ಹೇಳುತ್ತೇನೆ. ಬಡ್ಡಿ ಮನ್ನಾ ಮಾಡಿರುವ ವಿಷಯದಲ್ಲಿ ಬುಕ್ ಅಡ್ಜಸ್ಟ್‌ಮೆಂಟ್ ಮಾಡಿರುವುದರಿಂದ ರೈತರುಗಳಿಗೆ ಇನ್ನೂ ಹೆಚ್ಚಿನ ಸಾಲವಾಗಿದೆ. ಮಾನ್ಯ ಸದಸ್ಯರು ಹೇಳುವುದೇನೆಂದರೆ, ಸಹಕಾರಿ ಆಂದೋಲನಕ್ಕೆ ಅರ್ಥವಿಲ್ಲದ ರೀತಿಯಲ್ಲಿ

ಸಹಕಾರ ಸಂಘಗಳು ಇವತ್ತಿನ ದಿವಸ ಮುಚ್ಚುವಂಥ ಸ್ಥಿತಿಗೆ ಬಂದಿದೆ. ಕೋ-ಆಪರೇಟಿವ್ ಇನ್ಸ್ಟಿಟೂಷನ್ಸ್‌ಗಳಿಗೆ ಸರ್ಕಾರದಿಂದ ಕೊಡಬೇಕಾದ ಹಣವನ್ನು ಕೊಡದಿದ್ದರೆ ಸಹಕಾರ ಸಂಘಗಳು ನಡೆಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಸರ್ಕಾರದಿಂದ ಕೊಡಬೇಕಾದ ಬ್ಯಾಲೆನ್ಸ್‌ನ್ನು ಈಗಲಾದರೂ ಕಟ್ಟುವುದಕ್ಕೆ ವ್ಯವಸ್ಥೆ ಮಾಡಲಾಗುತ್ತದೆಯೇ?

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಸದಸ್ಯರು ಹೇಳಿರುವುದು ಸತ್ಯ ಇದೆ. ಹಣ ತುಂಬುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ.

ಶ್ರೀ ಡಿ.ವಿ.ಸದಾನಂದಗೌಡ:- ನನಗೆ ಕೊಟ್ಟಿರುವ ಉತ್ತರದಲ್ಲಿ, ಕೆಲವು ಸಂಘಸ್ಥೂಲಗಳನ್ನು ಹೊಂದಿಸಿಕೊಳ್ಳುವುದಕ್ಕಾಗಿ ನಬಾರ್ಡ್‌ನಿಂದ ಷೇರು ಬಂಡವಾಳವನ್ನು ಪಡೆದು ಸರ್ಕಾರ ಪಾವತಿ ಮಾಡುತ್ತಿದೆ ಎಂದು ಹೇಳಲಾಗಿದೆ. ಎಷ್ಟು ಹಣವನ್ನು ಈ ರೀತಿ ನಬಾರ್ಡ್‌ನಿಂದ ಪಡೆದುಕೊಳ್ಳಲಾಗಿದೆ? ಮತ್ತು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಿಂದ ಬೇರೆ ಸಹಕಾರ ಸಂಘಗಳಿಗೆ ಎಷ್ಟು ಹಣವನ್ನು ಒದಗಿಸಲಾಗಿದೆಯೆಂದು ಹೇಳಲಾಗುತ್ತದೆಯೇ? ಪ್ರೈಮರಿ ಸೊಸೈಟಿಗಳಿಗೆ ಕೊಟ್ಟಿರುವ ಗೋದಾಮು ಲೋನ್ ಹಾಗೂ ಇನ್ನೂ ಹಲವಾರು ಲೋನ್‌ಗಳನ್ನು ಬುಕ್ ಅಡ್ಜಸ್ಟ್ ಮಾಡುವುದರ ಮೂಲಕ ಶೇಕಡಾ ನೂರರಷ್ಟು ಸಾಲ ವಸೂಲಾತಿಯಾಗಿದೆಯೆಂದು ತೋರಿಸುವ ಪ್ರವೃತ್ತಿ ಇದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಜೊತೆಗೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಮಳೆ ಬರದೆ ಬರಗಾಲ ಬರುವ ಸೂಚನೆ ಇರುವುದರಿಂದ ಸಹಕಾರ ಸಂಘಗಳ ಸಾಲ ವಸೂಲಾತಿ ಮತ್ತು ಜಪ್ತಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಬೇಕೆಂದು ನಾನು ಆಗ್ರಹಪಡಿಸುತ್ತೇನೆ, ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಬಾರ್ಡ್‌ನಿಂದ ಎಷ್ಟು ಹಣವನ್ನು ತರಿಸಲಾಗಿದೆಯೆಂದು ಕೇಳಿದ್ದಾರೆ. ಆ ಮಾಹಿತಿಯನ್ನು ನಂತರ ಮಾನ್ಯ ಸದಸ್ಯರಿಗೆ ಒದಗಿಸಿ ಕೊಡುತ್ತೇನೆ. ಇನ್ನು ರಾಜ್ಯದಲ್ಲಿ ಬರಗಾಲ ಬರುವ ಪರಿಸ್ಥಿತಿ ಇರುವುದರಿಂದ ಸಾಲ ವಸೂಲಾತಿ ನಿಲ್ಲಿಸಬೇಕೆಂದು ಕೇಳಿದ್ದಾರೆ, ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಸೊಸೈಟಿಗಳಲ್ಲಿ ನೂರಕ್ಕೆ ನೂರರಷ್ಟು ವಸೂಲು ಆಗಿದೆ. ಕೆಲವು ಸೊಸೈಟಿಯಲ್ಲಿ ಕೇವಲ 40 ಪರ್-ಸೆಂಟ್ ವಸೂಲಾತಿ ಆಗಿದೆ, ಇದರಿಂದ ಎಲ್ಲಾ ಕಡೆ ಬರ ಇದೆ ಎಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಡಿ.ವಿ.ಸದಾನಂದಗೌಡ:- ರಾಜ್ಯದಲ್ಲಿ ಸುಮಾರು 126 ತಾಲ್ಲೂಕುಗಳಲ್ಲಿ ತೀವ್ರ ಬರಗಾಲ ಇದೆಯೆಂದು ಸರ್ಕಾರದಿಂದ ರಿಪೋರ್ಟ್ ಬಂದಿದೆ. ಬರ ಕಾಣಿಸಿಕೊಂಡಿರುವ ತಾಲ್ಲೂಕುಗಳಲ್ಲಾದರೂ ಸಾಲ ವಸೂಲಿ ಹಾಗೂ ಜಪ್ತಿ ಮಾಡುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಆ ತಾಲ್ಲೂಕುಗಳಲ್ಲಿ ಏನಾದರೂ ಬದಲಿ ವ್ಯವಸ್ಥೆ ಮಾಡಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಸದಸ್ಯರ ಭಾವನೆಗಳನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಬಡ್ಡಿ ಮನ್ನಾ ಮಾಡಿದ್ದೇವೆಂದು ಹೇಳಿದರೂ 10 ವರ್ಷಗಳಿಂದ ಸಾಲ ಕಟ್ಟದೇ ಇರುವುದನ್ನೂ ಹಾಗೆಯೇ ಬಿಡಬೇಕೇ ಎಂಬ ಬಗ್ಗೆ ಮಾನ್ಯ ಸದಸ್ಯರೇ ಹೇಳಬೇಕು. ಹೊಸದಾಗಿ ಸಾಲ ತೆಗೆದುಕೊಂಡಿರುವವರಿಗೆ ಬೇಕಾದರೆ ಸಾಲ ವಸೂಲಾತಿಯನ್ನು ನಿಲ್ಲಿಸುತ್ತೇನೆ.

ವಿಷಯ:- ದ.ಕ.ಜಿಲ್ಲೆಯಲ್ಲಿ ಭೂಪರಿವರ್ತನಾ ಶುಲ್ಕದಲ್ಲಿ ಹೆಚ್ಚಳ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 82 (331)

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿವರ್ತನಾ ಶುಲ್ಕವನ್ನು ಹೆಚ್ಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ನೀಡುವುದು)

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಿಯ ಮೌಲ್ಯವು ಭೂ ನಮೂನೆಯಲ್ಲಿ ಏಕ ಪ್ರಕಾರವಾಗಿರದಿರುವುದು ಕಂದಾಯ ಇಲಾಖೆಯ ಗಮನಕ್ಕೆ ಬಂದಿದೆಯೇ?

ಇ) ವಿವಿಧ ಮೌಲ್ಯಗಳ ಭೂಮಿಗೆ ಜಿಲ್ಲೆಯಲ್ಲಿ ಏಕ ಪ್ರಕಾರವಾಗಿ ಭೂ ಪರಿವರ್ತನಾ ಶುಲ್ಕವನ್ನು ವಿಧಿಸಿರುವುದು ಅಸಮಂಜಸ ಕ್ರಮವಲ್ಲವೇ?

ಈ) ಭೂಮಿಯ ಮೌಲ್ಯದ ಆಧಾರದ ಮೇಲೆ ಭೂ ಪರಿವರ್ತನಾ ಶುಲ್ಕವನ್ನು ವಿಧಿಸುವುದಕ್ಕೆ ಸರ್ಕಾರದವರು ಪರಿಶೀಲಿಸುವರೇ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) ಸರ್ಕಾರವು ಆರ್‌ವಿ 21 ಎಲ್‌ಜಿಪಿ 93 ದಿನಾಂಕ 29.2.96ರಂದು ನಿಯಮ 107ಕ್ಕೆ ತಿದ್ದುಪಡಿ ಹೊರಡಿಸಿ ರಾಜ್ಯದ ಎಲ್ಲಾ ಭಾಗಗಳಿಗೂ ಅನ್ವಯವಾಗುವಂತೆ ಭೂ ಪರಿವರ್ತನಾ ಶುಲ್ಕ ಹೆಚ್ಚಿಸಿ ದರವನ್ನು ನಿಗಧಿಪಡಿಸಲಾಗಿದೆ.

ಆ ಮತ್ತು ಇ) ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 95ರನ್ವಯ ಕೃಷಿ ಭೂಮಿಗಳನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸುವಾಗ, ಭೂ ಕಂದಾಯ ನಿಯಮಗಳು 1966ರ ನಿಯಮ 107ರನ್ವಯ ಶುಲ್ಕಗಳನ್ನು ಭೂ ಉಪಯೋಗಕ್ಕೆ ಸಂಬಂಧಿಸಿದಂತೆ, ಅಂದರೆ ವಸತಿ ಅಥವಾ ವಾಣಿಜ್ಯ ಉಪಯೋಗಕ್ಕಾಗಿ ಪರಿವರ್ತಿಸಿದಂತೆ ಶುಲ್ಕಗಳನ್ನು ವಿಧಿಸಲಾಗುವುದು.

ಈ) ಇಲ್ಲ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಕೊಟ್ಟಿರುವ ಉತ್ತರ ನನಗೆ ಸಮಂಜಸವಾಗಿ ಕಾಣುತ್ತಿಲ್ಲ. ಸರ್ಕಾರಿ ಮೂಲದಿಂದ ನಾನು